ಮುದಿಚಿಕ್ಕಮ್ಮನ ಕಣ್ಮುಂದೆ ಪೂರಿಯ ಚಿತ್ರ ನಾಟ್ಯವಾಡತೊಡಗಿತು. ಕೆಂಪಕೆಂಪಗೆ, ಉಬ್ಬಿಕೊಂಡು ಮೆತ್ತಗಿರಬಹುದು ಆ ಪೂರಿಗಳು! ಕರ್ಜಿಕಾಯಲ್ಲಿ ಏಲಕ್ಕಿ ಓಮಕಾಳಿನ ವಾಸನೆ ಬರುತ್ತಿರಬಹುದು. ಒಂದು ಪೂರಿಯಾದರು ಸಿಕ್ಕಿದ್ದರೆ ಕೈಯಲ್ಲಾದರೂ ಹಿಡಿದು ನೋಡುತ್ತಿದ್ದೆ. ಬಾಣಲೆ ಹತ್ತಿರವೇ ಹೋಗಿ ಏಕೆ ಕುಳಿತುಕೊಳ್ಳಬಾರದು? ಪೂರಿ ಉಬ್ಬಿ ಉಬ್ಬಿ ಮೇಲೇಳುತ್ತಿರಬಹುದು. ಅಡಿಗೆಯವನ್ನು ಅವನ್ನು ತಟ್ಟೆಯಲ್ಲಿ ಹಾಕುತ್ತಿರಬಹುದು. ಹೂವನ್ನು ಮನೆಯಲ್ಲಿಯೇ ಮೂಸಿ ವಾಸನೆ ನೋಡಬಹುದು. ಆದರೆ ತೋಟದಲ್ಲಿಯೇ ಹೋದರೆ ಅದರ ಮಜವೇ ಬೇರೆ. ಹೀಗೆ ಯೋಚಿಸಿ ಮುದಿಚಿಕ್ಕಮ್ಮ ಕೈ ಊರಿಕೊಂಡು ತೆವಳುತ್ತಾ ಬಾಗಿಲಿಂದ ಮೆಲ್ಲಗೆ ಕೆಳಗೆ ಇಳಿದು ತೆವಳಿಕೊಂಡೇ ಬಾಣಲೆಯ ಮುಂದೆ ಹೋಗಿ ಕುಳಿತಳು.

ರೂಪ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು. ಒಂದು ಸಲ ಆ ಕೋಣೆಗೆ ಹೋಗುತ್ತಿದ್ದಳು. ಒಂದು ಸಲ ಈ ಕೋಣೆಗೆ, ಒಂದು ಸಲ ಬಾಣಲೆ ಹತ್ತಿರಕ್ಕೆ ಒಂದು ಸಲ ಸ್ಟೋರ್ ರೂಂನ ಹತ್ತಿರಕ್ಕೆ ನಡೆದಾಡುತ್ತಿದ್ದಳು. ಒಬ್ಬ ಬಂದು 'ನೀರು ಬೇಕಂತೆ' ಎಂದರೆ ಮತ್ತೊಬ್ಬ ಬಂದು 'ಆಳು ಬಂದಿದ್ದಾನೆ, ಅವನಿಗೆ ಏನಾದರೂ ಬೇಕಂತೆ' ಎನ್ನುತ್ತಿದ್ದ. ಮಗದೊಬ್ಬ ಬಂದು 'ಇನ್ನೂ ಊಟವಾಗಲು ಎಷ್ಟು ಹೊತ್ತು ಬೇಕು' ಎನ್ನುತ್ತಿದ್ದ. ಪಾಪ, ಅವಳೊಬ್ಬಳೇ ಓಡಾಡಬೇಕಾಗುತ್ತಿತ್ತು. ಅವಳು ಒಂದೊಂದು ಸಾರಿ ಸಿಡುಕುತ್ತಿದ್ದಳು, ರೇಗುತ್ತಿದ್ದಳು. ಆದರೆ ಕೋಪವನ್ನು ತೋರಿಸುವ ಹಾಗೂ ಇರಲಿಲ್ಲ. ಅಕ್ಕಪಕ್ಕದವರು ಏನೆಂದುಕೊಂಡಾರೋ ಎಂಬ ಅಳುಕು. ಅವಳಿಗೆ ಬಾಯಾರಿ ಗಂಟಲು ಒಣಗುತ್ತಿದ್ದರೂ ನೀರು ಕುಡಿಯಲು ಸಮಯ ಸಿಗುತ್ತಿರಲಿಲ್ಲ. ಗಾಳಿ ಬೀಸಿಕೊಳ್ಳಲು ಅವಕಾಶವಾಗುತ್ತಿರಲಿಲ್ಲ. ಕಣ್ಣು ತಪ್ಪಿಸಿದರೆ ಪದಾರ್ಥ ಹಾಳಾಗಬಹುದೆಂಬ ಭಯ. ಹೀಗಿರುವಾಗ ಮುದಿಚಿಕ್ಕಮ್ಮ ಬಾಣಲೆಯ ಮುಂದೆ ಕುಳಿತಿರುವುದನ್ನು ನೋಡಿ ಅವಳ ಮೇಲೆ ಉರಿದುಬಿದ್ದಳು. ಅಕ್ಕಪಕ್ಕದವರು ಕುಳಿತಿದ್ದಾರೆ, ಗಂಡಸರಿದ್ದಾರೆ ಅವರು ಏನೆನ್ನುವರೆಂಬ ಗಮನವೂ ಅವಳಿಗಿರಲಿಲ್ಲ. ಹಲ್ಲಿಯ ಮೇಲೆ ಕಪ್ಪೆ ಎರಗುವಂತೆ ಮುದಿಚಿಕ್ಕಮ್ಮನ ಮೇಲೆ ಎರಗಿದಳು. ಎರಡೂ ಕೈಯಿಂದ ಎಳೆಯುತ್ತಾ ನಿನ್ನ ಹೊಟ್ಟೆಗೆ ಬೆಂಕಿ ಹಾಕ, ನಿನ್ನದು ಹೊಟ್ಟೆಯೋ ಪಟ್ಟಣವೋ? ಕೋಣೆಯಲ್ಲಿ ಕುಳಿತಿದ್ದರೆ ನಿನ್ನ ಪ್ರಾಣ ಹೋಗುತ್ತಿತ್ತೇನು? ಬಂದವರಿಗೆ ಊಟವಾಗಿಲ್ಲ. ದೇವರಿಗೆ ನೈವೇದ್ಯವಾಗಿಲ್ಲ. ಅಲ್ಲಿಯವರೆಗೆ ಕಾಯುವುದಿಕ್ಕೆ ಆಗಲಿಲ್ಲವೆ? ಬಂದು ಎದೆಯ ಮೇಲೆ ಕುಳಿತುಬಿಟ್ಟಳು, ನಿನ್ನ ನಾಲಿಗೆ ಉರಿದು ಹೋಗ, ಒಂದು ದಿನ ತಿನ್ನದೇ ಹೋಗಿಬಿಟ್ಟರೆ ಇನ್ನೊಬ್ಬರ ಎಂಜಲಿಗೇ ಬಾಯಿ ಹಾಕುತ್ತೀಯ. ಹೀಗೆ ಬಾಯಿಬಿಟ್ಟುಕೊಂಡು ಕುಳಿತಿದ್ದರೆ ಜನ ಏನನ್ನುತ್ತಾರೆ. ಹೊಟ್ಟೆ ತುಂಬಾ ಊಟ ಹಾಕುವುದಿಲ್ಲವೇನೋ ಎನ್ನುತ್ತಾರೆ. ಈ ಮುದುಕಿ ತಿಂದ ಹೊರತು ಸಾಯುವುದಿಲ್ಲ. ನಮ್ಮ ಹೆಸರು ಕೆಡಿಸುವುದಕ್ಕೆ ನಿಂತಿದ್ದಾಳೆ. ಹೊಟ್ಟೆಗೆ ಎಷ್ಟು ತುಂಬಿದರೂ ಅದು ಎಲ್ಲಿ ಭಸ್ಮವಾಗಿ ಹೋಗುತ್ತೋ ದೇವರೇ ಬಲ್ಲ! ತೆಪ್ಪಗೆ ಒಳಗೆ ಹೋಗಿ ಒಳಗೆ ಕುಳಿತುಕೋ. ಎಲ್ಲರದ್ದೂ ಊಟ ಆದಮೇಲೆ ನಿನಗೂ ಹಾಕುತ್ತೇವೆ. ನಿನ್ನ ಪೂಜೆ ಆಗದೆ ಯಾರೂ ನೀರು ಕುಡಿಯದೇ ಇರೋದಿಕ್ಕೆ ನೀನೇನು ದೇವತೆಯೇ!

ಮುದಿಚಿಕ್ಕಮ್ಮ ತಲೆ ಎತ್ತಲಿಲ್ಲ, ಮಾತಾಡಲಿಲ್ಲ, ಅಳಲಿಲ್ಲ. ಸುಮ್ಮನೆ ತೆವಳಿಕೊಂಡು ತನ್ನ ಕೋಣೆಗೆ ಹೊರಟು ಹೋದಳು. ಆ ಧ್ವನಿ ಎಷ್ಟು ಕಠೋರವಾಗಿತ್ತೆಂದರೆ ಹೃದಯ, ಬುದ್ಧಿ, ವಿಚಾರ ಎಲ್ಲವೂ ಆ ಕಡೆಗೇ ಆಕರ್ಷಿತವಾಗಿಬಿಟ್ಟಿದ್ದವು. ನದಿಯಲ್ಲಿ ನೆಲ ಕುಸಿದ ಕಡೆಗೇ ಎಲ್ಲ ನೀರು ಒಟ್ಟಿಗೆ ಪ್ರವಹಿಸುವಂತಾಗಿತ್ತು ಅವಳ ಸ್ಥಿತಿ.